VIDYAVARDHAKA LAW COLLEGE
LIBRARY
MYSURU

0102/0324

**First Semester 3 Year LL.B./Third Semester B.A.LL.B./B.B.A.LL.B. Examination, June/July 2015**

**CONSTITUTION/CONSTITUTIONAL LAW**

Duration : 3 Hours                                                        Max. Marks : 100

**Instructions :** 1. Answer Question No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written in **English** or **Kannada**.

**ಸೂಚನೆ :** 1. ಪ್ರಶ್ನೆ **9** ಮತ್ತು ಉಳಿದ ಯಾವುದಾದರೂ ಐದಕ್ಕೆ ಉತ್ತರಿಸಿರಿ.

2. ಪ್ರಶ್ನೆ **9** ಕ್ಕೆ **20** ಅಂಕಗಳಿದ್ದು ಉಳಿದವುಗಳಿಗೆ ತಲಾ **16** ಅಂಕಗಳಿವೆ.

3. ಉತ್ತರವನ್ನು ಸಂಪೂರ್ಣವಾಗಿ **ಕನ್ನಡ** ಅಥವಾ **ಇಂಗ್ಲೀಷ್‌**ನಲ್ಲಿ ಬರೆಯಬೇಕು.

Q. No. 1. Explain the nature and special features of Constitution of India. Marks : 16

ಭಾರತ ಸಂವಿಧಾನದ ಸ್ವರೂಪ ಮತ್ತು ವಿಶಿಷ್ಟ ಲಕ್ಷಣಗಳನ್ನು ವಿವರಿಸಿ.

Q. No. 2. Every exercise of arbitrary power is negation of equality is considered to be a "new doctrine of equality" in comparison with traditional judicial formula of classification test of equality. Elucidate. Marks : 16

ಸಾಂಪ್ರದಾಯಿಕ ನ್ಯಾಯಾಂಗ ಸೂತ್ರದನುಸಾರದ 'ವಿಭಾಗೀಕರಣ ಸಮಾನತೆ'ಗೆ ಹೋಲಿಸಿದಲ್ಲಿ ಪ್ರತಿ ನಿರಂಕುಶ ಅಧಿಕಾರದ ಚಲಾಯಿಸುವಿಕೆಯು ಸಮಾನತೆಯನ್ನು ನಿರಾಕರಿಸುತ್ತದೆ ಎಂಬುದು "ನವ್ಯ ಸಮಾನತೆಯ ಸಿದ್ಧಾಂತ". ವಿಶದೀಕರಿಸಿ.

Q. No. 3. Explain the nature and scope of freedom of speech and expression with special reference to Silence, Press/Media Advertisement and Information. Marks : 16

ಮೌನ, ಮುದ್ರಣ/ಮಾಧ್ಯಮ, ಜಾಹೀರಾತು ಮತ್ತು ಮಾಹಿತಿ ಸಂಬಂಧ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ವರೂಪ ಹಾಗೂ ವ್ಯಾಪ್ತಿಯನ್ನು ವಿವರಿಸಿ.

Q. No. 4. Trace the emerging regime of new rights and remedies as a result of reading directive principles of state policy into fundamental rights. Refer to cases. Marks : 16

ರಾಜ್ಯ ನಿರ್ದೇಶನ ತತ್ವಗಳನ್ನು ಮೂಲಭೂತ ಹಕ್ಕುಗಳೊಂದಿಗೆ ಸೇರಿಸಿ ವ್ಯಾಖ್ಯಾನಿಸಿದ ಪರಿಣಾಮವಾಗಿ ಆವಿಷ್ಕಾರಗೊಂಡ ಹೊಸ ಹಕ್ಕುಗಳು ಹಾಗೂ ಪರಿಹಾರಗಳನ್ನು ರೇಖಿಸಿ. ಪ್ರಕರಣಗಳನ್ನು ಉಲ್ಲೇಖಿಸಿ.

Q. No. 5. Explain the procedure and process for electing President of India. What are his powers and function ? Marks : 16

ಭಾರತದ ರಾಷ್ಟ್ರಪತಿಯ ಚುನಾವಣೆಯಲ್ಲಿ ಅನುಸರಿಸುವ ವಿಧಾನ ಮತ್ತು ಪ್ರಕ್ರಿಯೆಯನ್ನು ವಿವರಿಸಿ. ಅವರ ಅಧಿಕಾರ, ಪ್ರಕಾರ್ಯಗಳು ಯಾವುವು ?

Q. No. 6. Explain the composition and functions of parliament with reference. Marks : 16

ಸಂಸತ್ತಿನ ರಚನೆ ಹಾಗೂ ಮಸೂದೆಯೊಂದನ್ನು ಅನುಮೋದಿಸುವ ಪ್ರಕ್ರಿಯೆಯ ಪ್ರಕಾರ್ಯವನ್ನು ವಿವರಿಸಿ.

Q. No. 7. What is an amendment ? State the types and procedure for amending the Constitution of India. Marks : 16

ತಿದ್ದುಪಡಿ ಎಂದರೇನು ? ವಿವಿಧ ರೀತಿಯ ತಿದ್ದುಪಡಿಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಭಾರತ ಸಂವಿಧಾನದಲ್ಲಿರುವಂತೆ ತಿಳಿಸಿ.

Q. No. 8. Write short note on **any two** of the following : Marks : 2×8=16

ಯಾವುದೇ **ಎರಡಕ್ಕೆ** ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

a) Public interest litigation

ಸಾರ್ವಜನಿಕ ಹಿತಾಸಕ್ತಿ ದಾವೆ

b) Jurisdiction of Supreme Court

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧಿಕಾರದ ವ್ಯಾಪ್ತಿ

c) Constitutional safeguards to civil servants.

ಲೋಕಸೇವಾ ನೌಕರರಿಗೆ ಸಂವಿಧಾನಾತ್ಮಕ ರಕ್ಷಣೆಗಳು.

Q. No. 9. Solve **any two** of the following problems : Marks : 2×10=20

ಯಾವುದೇ ಎರಡು ಸಮಸ್ಯೆಗಳನ್ನು ಪರಿಹರಿಸಿ :

a) Governor of Karnataka, in view of the increasing crime rate and breakdown of law and order and inefficient ministry reported to the Union Government that there is failure of constitutional machinery and hence recommended for imposition of state emergency. On the basis of report elected government was dismissed by issuing proclamation of state emergency without giving Chief Minister and council of ministers and opportunity of being heard. Chief Minister challenges it. Decide.

ಅಪರಾಧಗಳ ಹೆಚ್ಚಳ, ಕಾನೂನು ವ್ಯವಸ್ಥೆ ಅಧಃಪತನ ಹಾಗೂ ಅಸಮರ್ಥ ಮಂತ್ರಿಗಳಿಂದ ಸಂವಿಧಾನಬದ್ಧ ಆಡಳಿತದಲ್ಲಿ ವೈಫಲ್ಯತೆ ಉಂಟಾಗಿದೆ ಎಂದು ವರದಿ ನೀಡುತ್ತಾ ರಾಜ್ಯ ತುರ್ತುಪರಿಸ್ಥಿತಿಯನ್ನು ವಿಧಿಸಲು ಕರ್ನಾಟಕದ ರಾಜ್ಯಪಾಲರು ಶಿಫಾರಸ್ಸಿರುತ್ತಾರೆ. ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳಿಗೆ ಸುನಾವಣೆಯ ಅವಕಾಶ ನೀಡದೆ ರಾಜ್ಯಪಾಲರ ವರದಿ ಆಧಾರದ ಮೇಲೆ ರಾಜ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಿ ಚುನಾಯಿತ ಸರಕಾರವನ್ನು ವಜಾಗೊಳಿಸಲಾಗಿದೆ. ಮುಖ್ಯಮಂತ್ರಿ ಈ ಕ್ರಮವನ್ನು ಪ್ರಶ್ನಿಸಿದ್ದಾರೆ. ತೀರ್ಮಾನಿಸಿ.

b) A person was arrested under warrant issued by the speaker of Lok Sabha for being produced before the Lok Sabha for answering alleged breach of privilege. He was reprimanded without mentioning the breach of privilege of the house. A writ of Habeas Corpus is filed to secure his release. Decide.

ಲೋಕಸಭೆಯ ಸ್ಪೀಕರ್ ಅವರ ಆಜ್ಞಾಪತ್ರದನ್ವಯ ವ್ಯಕ್ತಿಯೊಬ್ಬನು ಲೋಕಸಭೆಯ ವಿಶೇಷಾಧಿಕಾರಗಳ ಉಲ್ಲಂಘನೆ ಮಾಡಿದ್ದಾಗಿ ಆ ಸಭೆಯ ಮುಂದೆ ಸಾದರಪಡಿಸುವ ಸಲುವಾಗಿ ದಸ್ತಗಿರಿ ಮಾಡಲಾಗಿದೆ. ಉಲ್ಲಂಘಿಸಲಾಗಿದೆ ಎಂದು ಹೇಳಲಾದ ಲೋಕಸಭೆಯ ವಿಶೇಷಾಧಿಕಾರವೇನೆಂಬುದನ್ನು ಆಜ್ಞಾಪತ್ರದಲ್ಲಿ ಸ್ಪಷ್ಟಪಡಿಸದೆ ತಪ್ಪಿತಸ್ಥನೆಂದು ತೀರ್ಮಾನಿಸಲಾಗಿದೆ. ದಸ್ತಗಿರಿಯಾದ ವ್ಯಕ್ತಿಯನ್ನು ನ್ಯಾಯಾಲಯದಲ್ಲಿ ಹಾಜರ್ಪಡಿಸಬೇಕೆಂದು 'ಹೇಬಿಯಸ್ ಕಾರ್ಪಸ್' ರಿಟ್‌ನ್ನು ಸಲ್ಲಿಸಲಾಗಿದೆ. ತೀರ್ಮಾನಿಸಿ.

c) Inmates of government run free hostels protests the rate fixed for a day food is megre when compared to food provided to inmates of Jail. Their claim was future builders of the nation are being deprived of quality food and minimum standard of living. Discuss whether it is violative of any specific fundamental right ?

ಸರ್ಕಾರದ ಉಚಿತ ಹಾಸ್ಟೆಲ್‌ಗಳ ವಾಸಿಗಳು ತಮಗೆ ನೀಡುತ್ತಿರುವ ಆಹಾರ ದರವು ಜೈಲಿನಲ್ಲಿರುವವರ ಆಹಾರ ದರಕ್ಕಿಂತ ಕನಿಷ್ಠವಾಗಿದೆಯೆಂದು ಪ್ರತಿಭಟಿಸುತ್ತಿದ್ದಾರೆ. ಭವಿಷ್ಯ ರಾಷ್ಟ್ರ ನಿರ್ಮಾತೃಗಳಿಗೆ ಗುಣಮಟ್ಟದ ಆಹಾರವನ್ನು ನೀಡುತ್ತಿಲ್ಲ ಹಾಗೂ ಕನಿಷ್ಠ ಜೀವನದ ಮಾನದಂಡವನ್ನು ನಿರಾಕರಿಸಲಾಗಿದೆ ಎನ್ನುತ್ತಿದ್ದಾರೆ. ಇದು ಯಾವುದಾದರೂ ನಿರ್ದಿಷ್ಟವಾದ ಮೂಲಭೂತ ಹಕ್ಕನ್ನು ಉಲ್ಲಂಘಿಸಲಾಗುತ್ತದೆಯೇ ಎಂಬುದನ್ನು ಚರ್ಚಿಸಿ.

---